ಅ) ವಿರಾಜಪೇಟೆ ಕ್ಷೇತ್ರದಲ್ಲಿ ಅಗ್ನಿಶಾಮಕ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರ ರೂ 147 ಕೋಟಿಯನ್ನು ಮಂಜೂರು ಮಾಡಿದ್ದರೂ ಸಹ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು,

ಆ) ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ ಸಚಿವರು) .

ಅ) ವಿರಾಜಪೇಟೆ ಕ್ಷೇತ್ರದ ಗೋಣಿಕೊಪ್ಪದಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಸರ್ಕಾರವು ಆದೇಶ ಸಂ ಒಇ 135 ಕಅಸೇ 2004, ದಿನಾಂಕ 14–7–2005ರಲ್ಲಿ ಮಂಜೂರಾತಿ ನೀಡಿದೆ ಈ ಆದೇಶದಲ್ಲಿ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳು ಸೇರಿದಂತೆ ಒಟ್ಟು 66,24,348 ರೂ ಗಳಿಗೆ ಸರ್ಕಾರ ಮಂಜೂರಾತಿ ನೀಡಿತ್ತು ಆದರೆ ಅಗ್ನಿಶಾಮಕ ಠಾಣೆಯನ್ನು ತೆರೆಯಲು ಬೇಕಾದ ಸೂಕ್ತವಾದ ಜಮೀನು ದೊರೆಯದ ಕಾರಣ ಠಾಣೆಯನ್ನು ಪ್ರಾರಂಭಿಸಿರುವುದಿಲ್ಲ ಸರ್ಕಾರ ರೂ 147 ಕೋಟಿಯನ್ನು ಮಂಜೂರು ಮಾಡಿರುವುದಿಲ್ಲ

ಆ) ನಿವೇಶನ ದೊರಕಿದ ನಂತರ ಹಣವನ್ನು ಒದಗಿಸಿಕೊಂಡು ಜಲವಾಹನ ಮತ್ತು ಇತರೆ ಉಪಕರಣಗಳನ್ನು ಪಡೆದು ಅಗ್ನಿಶಾಮಕ ಠಾಣೆಯನ್ನು ತೆರೆಯಲಾಗುವುದು

322 (31) ಶ್ರೀ ಬಸವರಾಜು ಹೆಚ್ ಡಿ (ವಿರಾಜಪೇಟೆ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕಿನಲ್ಲಿ ಕೆವಸ್ಆರ್‌ಟಿಸಿ ಮಿನಿಬಸ್ ಡಿಪೋ ಪ್ರಾರಂಭಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು,

ಇ) ಮಿನಿಬಸ್ ಡಿಪೋ ನಿರ್ಮಾಣಕ್ಕೆ ಸರ್ಕಾರ ವೆಚ್ಚ ಮಾಡಲಿರುವ ಹಣ ಎಷ್ಟು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಬಂದಿದೆ

ಆ) ಸೂಕ್ತವಾದ ನಿವೇಶನ ಪಡೆಯಲ ಪರಿಶೀಲಿಸಲಾಗುತ್ತಿದೆ

ಇ) ಸೂಕ್ತ ನಿವೇಶನವು ನಿಗಮಕ್ಕೆ ಲಭ್ಯವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು